

ಜಗತ್ತಿನ ನಾನಾ ಭಾಗಗಳಲ್ಲಿ ಅದೆಷ್ಟು ಪತ್ರಗಳ ಅದೆಷ್ಟು ಕೋಟಿ ಸಾಲುಗಳಲ್ಲಿ ಒಲವೆಂಬ ಭಾವನೆಯನ್ನು ನಾನಾ ಪಾತ್ರ ವಿಸ್ತಾರಗಳಲ್ಲಿ ಸುರಿದುಕೊಳ್ಳಲಾಗಿದೆಯೋ...

■ ವಸುಂಧರಾ ಕೆ.ಎಂ.

'ತಪ್ಪಿದ್ದರೆ ತಿದ್ದಿಕೋ, ಉಪ್ಪಿದ್ದರೆ ನೆಕ್ಕಿಕೋ' ಎಂಬ ತಮಾಷೆ ಸಾಲನ್ನು ಬರೆದುಬಿಡುತ್ತಿದ್ದೆವು. ಇದನ್ನಾದರೂ ಏಕೆ ಬರೆಯುತ್ತಿದ್ದೆವೋ ಗೊತ್ತಿಲ್ಲ. ಆದರೆ ಈ ಸಾಲು ಇರಲೇಬೇಕು ಎನ್ನುವುದು ನಮ್ಮ ಎಳವೆಯ ಅಲಿಖಿತ ನಿಯಮವಾಗಿತ್ತು. ಇಂತಹ ಅದೆಷ್ಟೋ ಅಲಿಖಿತ ನಿಯಮಗಳ ಸೊಗಸಿನೊಂದಿಗೆ ನಮ್ಮ ಬಾಲ್ಯವು ಚೆನ್ನಾಗಿತ್ತು. ಆ ರಸಗವಳವನ್ನು ಈಗ ಮೆಲುಕು ಹಾಕಬೇಕಿದೆ.

ಪತ್ರ ಲೇಖನದ ಬಗ್ಗೆ ಶಾಲೆಯಲ್ಲಿ ಒಂದು ಪಾಠ ಇರುತ್ತಿತ್ತು. ಅದರಲ್ಲಿ 'ಫಾರ್ಮಲ್ ಲೆಟರ್ಸ್' ಹಾಗೂ 'ಇನ್ಫಾರ್ಮಲ್ ಲೆಟರ್ಸ್'ಗಳ ವಿಶಿಷ್ಟತೆ, ವಿಭಿನ್ನತೆಗಳ ಬಗ್ಗೆ ಸವಿವರವಾಗಿ ಕಲಿಸುತ್ತಿದ್ದರು. ಪರೀಕ್ಷೆಗಳಲ್ಲಿ ನಾವು ಬಹುತೇಕ ಅಧಿಕೃತ ಪತ್ರಗಳ (ಫಾರ್ಮಲ್ ಲೆಟರ್ಸ್) ತಂಟೆಗೇ ಹೋಗುತ್ತಿರಲಿಲ್ಲ. ನಮಗೆ ಇನ್ಫಾರ್ಮಲ್ ಪತ್ರಗಳನ್ನು ಬರೆಯುವುದಕ್ಕೆ ಹೆಚ್ಚು ಇಷ್ಟವಾಗುತ್ತಿತ್ತು. ಏಕೆಂದರೆ, ಅದರಲ್ಲಿ ನಮ್ಮ ಕಲ್ಪನೆಯ ಏನನ್ನಾದರೂ ಬರೆಯಬಹುದೆಂಬ ವಿಚಾರವೇ ಆಕರ್ಷಕವಾಗಿರುತ್ತಿತ್ತು. ಅಲ್ಲದೇ ವೈಯಕ್ತಿಕವಾಗಿ ನನಗೆ ಬಿಟ್ಟು ಬಂದ ಊರುಗಳಲ್ಲಿದ್ದ ಸ್ನೇಹಿತರಿಗೆ ಪತ್ರ ಬರೆಯುತ್ತಿದ್ದ ಪ್ರಾಕ್ಟಿಕಲ್ ತರಬೇತಿಯ ಅನುಭವವೂ ಇತ್ತಲ್ಲ... ಆ ಕಾನ್ಫಿಡೆನ್ಸಿನಲ್ಲಿ ಇನ್ಫಾರ್ಮಲ್ ಪತ್ರ ಬರೆಯುತ್ತಿದ್ದೆ.

**ಉದಾಹರಣೆಗೆ, ಪರೀಕ್ಷೆಗಳಲ್ಲಿ:**

- ನಿಮ್ಮ ಊರಿಗೆ ಒಂದು ಗ್ರಂಥಾಲಯ ನೀಡುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ಒಂದು ಪತ್ರ ಬರೆಯಿರಿ.

  ಅಥವಾ

- ನಿಮ್ಮ ಶಾಲಾ ಪ್ರವಾಸ ಕುರಿತು ಊರಿನಲ್ಲಿರುವ ಗೆಳೆಯರಿಗೊಂದು ಪತ್ರ ಬರೆಯಿರಿ.

ಹೀಗೆ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿ ಬರೆಯುವ ಅವಕಾಶವಿದ್ದರೆ ನೋ ಡೌಟ್, ನಾನಂತೂ 'ಗೆಳೆಯರಿಗೆ ಪತ್ರ'ವನ್ನೇ ಆರಿಸುತ್ತಿದ್ದೆ.

ಮೊದಲಿಗೆ ಊರಿನಲ್ಲಿರುವ ಆ ಗೆಳೆಯ/ತಿ ಗೊಂದು ವಿಚಿತ್ರ ಹೆಸರನ್ನು ನಾಮಕರಣ ಮಾಡುವುದು. ವಿಚಿತ್ರ ಊರು, ಕೇರಿ ವಿಳಾಸ. ಎಲ್ಲವೂ ಕಲ್ಪನೆಯ ಹೆಸರು, ಕಲ್ಪನೆಯ ವಿಳಾಸವೇ. ಆಮೇಲೆ ಹೋಗದೇ ಇದ್ದ ಶಾಲಾ ಪ್ರವಾಸಕ್ಕೆ ಉಪ್ಪು ಹುಳಿ ಖಾರ ಬೆರೆಸಿ ಸುಮಾರು ಎರಡೂವರೆ ಪುಟ ಬರೆದೂ ಕೊರೆದೂ... ಪತ್ರ ಮುಗಿಸೋದು. ಐದು ಅಂಕದ ಪ್ರಶ್ನೆ ಇರಲಿ, ಹತ್ತು ಅಂಕದ ಪ್ರಶ್ನೆ ಇರಲಿ ಬರೆಯೋದು ಮಾತ್ರ ಎರಡೂವರೆ ಪುಟವೇ. ಇನ್ನು 'ಇಂದ' ವಿಳಾಸದಲ್ಲಿ ನಮ್ಮದೇ ಹೆಸರನ್ನು ಬರೆಯುವಂತಿಲ್ಲವೆಂದು ಗುರುಗಳು ಹೇಳಿರುತ್ತಿದ್ದರು. ಅದು ನಮಗೆ ಮತ್ತೊಂದು ಅನುಕೂಲ. ಅಲ್ಲಿ ನಮಗೆ ಇಷ್ಟವಾಗುವ ಯಾವುದಾದರೂ ಚಿತ್ರ ತಾರೆಯರ ಹೆಸರನ್ನೋ, ಎಬಿಸಿಡಿ, ಕಚಟತಪ, ಅಬಕಡ ಬರೆದು, ಮತ್ತೊಮ್ಮೆ ನಮ್ಮದಾಗಿರಬೇಕೆಂದು ಕನವರಿಸಿದ್ದ 'ರಮ್ಯ ವಿಳಾಸ' ವೊಂದನ್ನು ಅದೂ ಕಂಡೂ ಕೇಳರಿಯದ ಭೂಮಿಯ ಮೇಲೆ ಎಲ್ಲಿಯಾದರು ಇರಬಹುದೇ ಎಂಬ ಸಂಶಯವಿಲ್ಲದೆ, ಬರೆದು ಮುಗಿಸಿದರೆ ಯಾರೇ ಕರೆಕ್ಷನ್ ಮಾಡಿದರೂ ಐದಂಕ ಕೊಟ್ಟೇಕೊಡುತ್ತಾರೆನ್ನುವ ಆತ್ಮವಿಶ್ವಾಸವಿರುತ್ತಿತ್ತು.

ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಪತ್ರಲೇಖನದ ಪ್ರಶ್ನೆಗೆ ಉತ್ತರ ಬರೆಯಬೇಕೆಂದು ಶಾಲೆಗಳಲ್ಲಿ ಟೀಚರ್ಸ್ ಹೇಳಿಕೊಡುತ್ತಿದ್ದರು. ಅದರಲ್ಲಿ ಇಂದ, ಗೆ, ದಿನಾಂಕ, ಸ್ಥಳ, ಮಾನ್ಯರೆ, ವಿಷಯ, ಉಲ್ಲೇಖ, ಒಕ್ಕಣೆ, ವಂದನೆಗಳು, ನಿಮ್ಮ ವಿಧೇಯ, ವಿಶ್ವಾಸಿ, ನಂಬುಗೆಯ, ಸಹಿ... ಹೀಗೆ ಕೆಲವು ನಿರ್ದಿಷ್ಟ ಫೀಚರ್ಸ್ ಬರೆದು ಬಿಟ್ಟರೆ ಅವುಗಳಿಗೆ ಅಂಕಗಳು ಬಂದೇ ಬರುತ್ತವೆ. ಅಂಕಗಳಿಗೆ ಮೋಸ ಆಗುವುದಿಲ್ಲ ಎನ್ನುವುದು ಅದರ ಒಂದು ಪ್ರಮುಖ ಕಾರಣವಾಗಿತ್ತು. ಕನ್ನಡದಂತೆಯೇ ಇಂಗ್ಲಿಷಿನಲ್ಲೂ 'ಲೆಟರ್ ರೈಟಿಂಗ್' ಅನ್ನೋದು ಬಹುವಾಗಿ ಇಷ್ಟವಾಗುತ್ತಿದ್ದ ವಿಷಯ. ಒಟ್ಟಿನಲ್ಲಿ ಲ್ಯಾಂಗ್ವೇಜಿನಲ್ಲಿ ಪತ್ರ ಬರವಣಿಗೆಯಿಂದ ಒಂದೈದಾರು ಅಂಕಗಳು ಹೆಚ್ಚಿಗೆ ಬರುತ್ತಿದ್ದದ್ದು ಮಾತ್ರ ಸುಳ್ಳಲ್ಲ.

ಹೈಸ್ಕೂಲಿಗೆ ಬರುವಾಗ ಪಠ್ಯ ಪುಸ್ತಕಗಳ ಜೊತೆಗೆ 'ಗೈಡ್'ಗಳೆಂಬ 'ವಿದ್ಯಾರ್ಥಿಸ್ನೇಹಿ ಪುಸ್ತಕ'ಗಳು ವಿದ್ಯಾರ್ಥಿಗಳ ಬಳಿ ಇರಬೇಕೆಂಬ ನಿಯಮವಿತ್ತೇನೋ. ಗೈಡ್‌ಗಳನ್ನು ಕಡ್ಡಾಯವಾಗಿ ಇಟ್ಟುಕೊಂಡಿರುವುದು ಒಳ್ಳೆಯದು ಎಂಬ ಬೋಧನೆಯು ನಮಗೆ ಹಿರಿಯ ವಿದ್ಯಾರ್ಥಿಗಳಿಂದ ಆಗಿರುತ್ತಿತ್ತು. ಅದರಂತೆ ನನ್ನ ಬಳಿಯೂ ಹೀಗೊಂದು 'ಗೈಡ್' ಇದ್ದಿತು. ನಾನಂತೂ ಆ 'ಗೈಡ್'ನಲ್ಲಿ ಬೇರೆ ಯಾವುದನ್ನು ಓದಿರದಿದ್ದರೂ ಪತ್ರ ಲೇಖನಗಳನ್ನು ಓದುವುದನ್ನು ಮರೆಯುತ್ತಿರಲಿಲ್ಲ. ಏಕೆಂದರೆ. ಅದರಲ್ಲಿನ ಪತ್ರಗಳಲ್ಲಿ ಪ್ರಸ್ತಾವಿತವಾಗಿರುವ ವಿಷಯವಸ್ತು ವಿಭಿನ್ನತೆ, ಪ್ರಸ್ತುತಿಗಳು ಓದುವುದಕ್ಕೆ ಖುಷಿ ಕೊಡುತ್ತಿದ್ದವು.

ಇನ್ನು ಬಾಲ್ಯ ಹೊರತುಪಡಿಸಿ ಬರೆಯುವ ಅಥವಾ ಬರೆದ ಪತ್ರಗಳೆಂದರೆ ಪ್ರೇಮಪತ್ರಗಳೇ. ಅಲ್ಲದೇ ಪತ್ರಗಳು ಪ್ರೇಮ ನಿವೇದನೆಗೆ ಬಹಳ ಸೂಕ್ತವಾದವೂ ಕೂಡ. ಜಗತ್ತಿನ ನಾನಾ ಭಾಗಗಳಲ್ಲಿ ಅದೆಷ್ಟು ಪತ್ರಗಳ ಅದೆಷ್ಟು ಕೋಟಿ ಸಾಲುಗಳಲ್ಲಿ ಒಲವೆಂಬ ಭಾವನೆಯನ್ನು ನಾನಾ ಪಾತ್ರ ವಿಸ್ತಾರಗಳಲ್ಲಿ ಸುರಿದುಕೊಳ್ಳಲಾಗಿದೆಯೋ! ಅದರ ಕುರಿತೇ ಬರೆಯುವುದಾದರೆ ಅದೇ ಮತ್ತೊಂದು ದೊಡ್ಡ ಬರಹವಾಗಬಹುದು.

ಇನ್ನು ಪತ್ರ ಚಳವಳಿಗೆ ಬಹುದೊಡ್ಡ ಇತಿಹಾಸವಿದೆ. ದಾನ ಪತ್ರಗಳು, ಶಾಸನ ಪತ್ರಗಳು, ನೆಹರೂ ತಮ್ಮ ಮಗಳು ಇಂದಿರಾಗೆ ಬರೆದ ಜಗತ್ಪ್ರಸಿದ್ಧ ಪತ್ರಗಳು, ಮಹಾತ್ಮ ಗಾಂಧೀಜಿ ಬರೆದ ಪತ್ರಗಳು, 'ಮಗಳಿಗೊಂದು ಪತ್ರ' ಬರೆದ ಧರ್ಮಸ್ಥಳದ ರತ್ನಮ್ಮಾಜಿಯವರ ಪತ್ರಗಳು ಪತ್ರಲೇಖನದ ಅನಂತ ಸಾಧ್ಯತೆಯನ್ನು ದಗ್ದರ್ಶಿಸುತ್ತವೆ.

ಒಬ್ಬರಿಗೆ ಬಂದ ಪತ್ರಗಳನ್ನು ಮತ್ತೊಬ್ಬರು ಓದಬಾರದು ಎನ್ನುವುದು ಎಳೆತನದಲ್ಲಿ ನಮಗೆ ಕಲಿಸಲಾಗುವ ಸಭ್ಯತೆಯ, ಶಿಷ್ಟಾಚಾರದ ಒಂದು ಪಾಠ. ಅದನ್ನು ಪಾಲಿಸಲು ಈಗೀಗ ಅವಕಾಶಗಳೇ ಇಲ್ಲವಾಗಿದೆ. ಪತ್ರ ಸಂಸ್ಕೃತಿಯು ನೇಪಥ್ಯಕ್ಕೆ ಸರಿಯುವಷ್ಟು ಮರೆಯಾಗಿದೆ. ಮೊಬೈಲ್, ಫೇಸ್ ಬುಕ್, ವಾಟ್ಸ್‌ಆ್ಯಪ್ , ಸ್ಕೈಪ್, ವಿಡಿಯೊಕಾಲ್‌ಗಳ ಹಾವಳಿ ಹೆಚ್ಚಾಗಿದೆ ಎಂಬ ಕೂಗಿನ ಜೊತೆಯಲ್ಲೇ ಬರವಣಿಗೆಗೆ ಬೇಕಾಗುವ ಭಾಷೆ, ಭಾವನೆ, ಬಾಂಧವ್ಯವೂ ಮರೆಯಾಗುತ್ತಿರುವುದು ಸಹ ಪತ್ರ ಬರೆಯದೇ ಇರುವುದಕ್ಕಿರುವ ಮತ್ತೊಂದು ದೊಡ್ಡ ಕಾರಣ ಹಾಗೂ ಅತಿದೊಡ್ಡ ಕೊರತೆ... ■